## ಪ್ರಾರ್ಥನೆ

# ಶ್ರೀಶಾರದಾದೇವಿ ಸುಪ್ರಭಾತಮ್ - ೨

**ಹೃದ್ಯಾನವದ್ಯಮೃದುಶೀಲಗುಣೇ ಸಮಸ್ತೈ-**
**ಹೃರ್ದ್ಯಾದರೇಣ ಸತತಂ ಪರಿಚಿಂತ್ಯಮಾನೇ।**
**ವಿದ್ಯಾವಿಶೇಷವಿಶದೀಕೃತಚಿತ್ತಪದ್ಮೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥ ೫ ॥**

ಮನೋಹರವೂ ಶ್ರೇಷ್ಠವೂ ಆದ ಮೃದುವಾದ ಗುಣಶೀಲವುಳ್ಳವಳೇ, ಎಲ್ಲರಿಂದಲೂ ಯಾವಾಗಲೂ ಆದರದಿಂದ ಹೃದಯದಲ್ಲಿ ಭಾವಿಸಲ್ಪಡುವವಳೇ, ವಿಶೇಷವಾದ ವಿದ್ಯೆಯಿಂದ ನಿರ್ಮಲಗೊಂಡಿರುವ ಚಿತ್ತಕಮಲವುಳ್ಳ ತಾಯಿ ಸುಚರಿತೆ, ಶಾರದೆ, ನಿನಗೆ ಸುಪ್ರಭಾತ.

**ದಿವ್ಯಪ್ರಭಾವಲಿಯುತೇ ಸಕಲೈರಜಸ್ರಂ**
**ಸ್ತವ್ಯಪ್ರಭಾವಲಯಿತೇ ನಿಖಿಲಾಭಿವಂದ್ಯೇ।**
**ಭವ್ಯಪ್ರಕರ್ಷವಿಲಸನ್ಮಹನೀಯರೂಪೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥ ೬ ॥**

ದಿವ್ಯಪ್ರಭೆಯ ಕಾಂತಿವಲಯವುಳ್ಳ ತಾಯಿ, ಎಲ್ಲರಿಂದ ಸದಾ ಸ್ತುತಿಸಲ್ಪಡುವ ಸ್ತೋತ್ರಮಾಲೆಯಿಂದ ಕೂಡಿ ಸಕಲರಿಂದ ನಮಸ್ಕರಿಸಲ್ಪಡುವವಳೇ, ಭವ್ಯವೂ ಜಾಜ್ವಲ್ಯಮಾನವೂ ಆದ ಮಹಿಮಾನ್ವಿತೆ ದೇವಿ ಶಾರದೆ, ನಿನಗೆ ಸುಪ್ರಭಾತ.

**ಆಶಾವಕಾಶತತದಿವ್ಯಯಶೋವಿತಾನೇ**
**ಕ್ಲೇಶಾವಶಾಖಿಲಜನಾವನಜಾಗರೂಕೇ।**
**ಶ್ರೀಶಾದಿಸರ್ವದಿವಿಷದ್ಜನ್ಯೈಕಲೋಲೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥ ೭ ॥**

ಸಕಲ ದಿಕ್ಕುಗಳಲ್ಲೂ ತುಂಬಿಕೊಂಡಿರುವ ಕೀರ್ತಿಪತಾಕೆಯುಳ್ಳವಳೇ, ಕಷ್ಟ ಸಹಿಸಲಾಗದೆ ಬಾಧೆಪಡುತ್ತಿರುವ ಸಮಸ್ತರನ್ನೂ ರಕ್ಷಿಸಲೋಸುಗ ಸದಾ ಎಚ್ಚರವಾಗಿರುವವಳೆ, ಲಕ್ಷ್ಮಿಗೆ ಒಡೆಯನಾದ ವಿಷ್ಣುವೇ ಮೊದಲಾದ ಸಕಲದೇವತೆಗಳಿಂದಲೂ ಲಾಲಿತಳಾದ ಅಮ್ಮ ಶಾರದೆ, ನಿನಗೆ ಸುಪ್ರಭಾತ.



**ಸಂತಾಪನಾಶಿನಿ ಭವಾಮಯಪೀಡಿತಾನಾಂ**
**ಸಂತಾನಪಾದಪಸಮೇ ಚರಣಾನತಾನಾಮ್।**
**ಸಂತಾನಿತಾತ್ಮವಿಭವೇ ವಿನಯಾಭಿರಾಮೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥ ೮ ॥**

ಭವರೋಗಪೀಡಿತರಾದವರ ಸಂತಾಪವನ್ನು ನಿವಾರಿಸುವವಳೆ, ಪಾದಗಳಿಗೆ ವಂದಿಸಿದವರಿಗೆ ಕಲ್ಪವೃಕ್ಷವಾಗಿರುವ ಜನನಿ, ನಿರಂತರ ಆತ್ಮವೈಭವವನ್ನು ವಿಸ್ತಾರಗೊಳಿಸುತ್ತಿರುವವಳೆ, ವಿನಯದಿಂದ ಶೋಭಿಸುತ್ತಿರುವ ಶಾರದೆ, ನಿನಗೆ ಸುಪ್ರಭಾತ.

— ಸ್ವಾಮಿ ಜ್ಞಾನಾನಂದ ಸರಸ್ವತೀ

## ಸೂಕ್ತಿಪ್ರಭ

## ಜೈನ ಸೂಕ್ತಿಗಳು

**ಹೇ**ಗೆ ನಿನಗೆ ದುಃಖವು ಪ್ರಿಯವಲ್ಲವೊ, ಹಾಗೆಯೆ ಎಲ್ಲ ಜೀವಿಗಳಿಗೂ ದುಃಖವು ಪ್ರಿಯವಲ್ಲ— ಹೀಗೆಂದು ತಿಳಿದು, ಮತ್ತು ಎಚ್ಚರಿಕೆಯಿಂದ ಎಲ್ಲರನ್ನೂ ತನ್ನಂತೆ ನೋಡುತ್ತ, ಎಲ್ಲರ ಮೇಲೂ ದಯೆ ತೋರಿಸು. —ಭಗವಾನ್ ಮಹಾವೀರ

**ವಿ**ಷವು ಜೀವಿಯನ್ನು ಒಂದು ಸಲ ಮಾತ್ರ ಕೊಲ್ಲುತ್ತದೆ. ಆದರೆ ಇಂದ್ರಿಯಸುಖಕ್ಕೆ ಬಲಿಯಾದವನು ಇಹಲೋಕವೆಂಬ ಘೋರ ಅರಣ್ಯದಲ್ಲಿಯೇ ಸುತ್ತುತ್ತ ಅನೇಕ ಬಾರಿ ಸಾವಿಗೆ ಬಲಿಯಾಗುತ್ತಾನೆ. —ಕುಂದಕುಂದಾಚಾರ್ಯರು

**ಉ**ತ್ಕೃಷ್ಟ ಬುದ್ಧಿಯುಳ್ಳ ಮಾನವನು ಪ್ರಾಣ ಹೋಗುವಂತಹ ಪ್ರಸಂಗ ಬಂದರೂ ಕೂಡ ನಿಂದನೀಯವಾದ ಕಾರ್ಯವನ್ನು ಮಾಡಕೂಡದು. — ಸೋಮದೇವ ಸೂರಿ

**ಮ**ನುಷ್ಯಜಾತಿಯೆಂಬುದು ಅದು ಒಂದೇ ಅಲ್ಲವೆ?

— ಆದಿಕವಿ ಪಂಪ

**ಧ**ರ್ಮದ ಪ್ರಭಾವದಿಂದ ನಾಯಿ ಕೂಡ ದೇವನಾಗಿ ಸ್ವರ್ಗಕ್ಕೆ ಹೋಗುವುದು. ಪಾಪದ ಪ್ರಭಾವದಿಂದ ಸ್ವರ್ಗದ ದೇವನು ಕೂಡ ನಾಯಿಯಾಗುವನು. — ಆಚಾರ್ಯ ಸಮಂತಭದ್ರ